**IN THE COURT OF THE SENIOR CIVIL JUDGE AND JMFC, TIPTUR.**

**CC No. 34/2018**

**CW-6**
**PW-4**

**Oath is Administered to the Witness on 06.08.2024**

| | | |
|---|---|---|
| **Witness Name** | **:** | **Chethan** |
| **Father Name** | **:** | **Manjunatha B.A.** |
| **Age** | **:** | **30 Years** |
| **Occupation** | **:** | **Data Entry Assistant Agriculture Office, Tiptur** |
| **Address** | **:** | **Tiptur** |

**Chief Examination: By Assistant Public Prosecutor:-**

ನಾನು 2016 ರಿಂದ 2018 ರವರೆಗೂ ಮಣಪ್ಪುರಂ ಗೋಲ್ಡ್ ಫೈನಾನ್ಸ್ ನ ಬೇಲೂರು ಮತ್ತು ಹಾಸನದ ಬಿಎಂ ರೋಡ್ ಬ್ರ್ಯಾಂಚ್ ನಲ್ಲಿ Branch Assistant ಮತ್ತು ಶಾಖಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೆ.

ನಾನು ಹಾಸನದ ಬಿಎಂ ರೋಡ್ ಬ್ರ್ಯಾಂಚ್ ನಲ್ಲಿ Branch Assistant ಆಗಿ ಕೆಲಸ ಮಾಡತ್ತಿದ್ದಾಗ ದಿಃ 25.03.2017 ರಂದು ಚಾಸಾ 16 ರವರು ವಿಜಯ್ ಕುಮಾರ್ ಎನ್ನುವ ವ್ಯಕ್ತಿಯ ಜೊತೆ ನಮ್ಮ ಶಾಖೆಗೆ ಬಂದು ಸದರಿ ವಿಜಯ್ ಕುಮಾರ್ ರವರು ಅವರ ಸಂಬಂದಿಕರಾದ ದೀಪು, ಜಯಲಕ್ಷ್ಮೀ, ಮಂಜೇಗೌಡ ಇವರ ಹೆಸರಿನಲ್ಲಿ ಒಟ್ಟು 7 ಖಾತೆಯಲ್ಲಿ ಒಟ್ಟು 91.9 ಗ್ರಾಂ ಚಿನ್ನವನ್ನು ನಮ್ಮ ಶಾಖೆಯಲ್ಲಿ ಅಡಮಾನ ಮಾಡಿದ್ದರು. ಆ ಸಮಯದಲ್ಲಿ ದೀಪು, ಜಯಲಕ್ಷ್ಮೀ, ಮಂಜೇಗೌಡ ರವರನ್ನು ಸಹ ಕರೆದುಕೊಂಡು ಬಂದಿದ್ದರು. ವಿಜಯ್ ಕುಮಾರ್ ರವರು ಸದರಿ ಚಿನ್ನವನ್ನು ಕಳ್ಳತನ ಮಾಡಿಕೊಂಡು ಬಂದು ಇವರ ಹೆಸರಿನಲ್ಲಿ ನಮ್ಮ ಶಾಖೆಯಲ್ಲಿ ಅಡಮಾನ ಮಾಡಿದ್ದಾರೆ ಎಂದು ಚಾಸಾ 16 ರವರು ನಮಗೆ ತಿಳಿಸಿದರು. ಅದರಲ್ಲಿ ನೆಕ್ಲೆಸ್, ಸರ, ಜುಮುಖಿ, ಓಲೆ, ಮಾಟಿ, ಉಂಗುರಗಳು ಇದ್ದು, ಈ ಎಲ್ಲಾ ವಸ್ತುಗಳನ್ನು ಚಾಸಾ 16 ರವರು ನನ್ನ ಮತ್ತು ಚಾಸಾ4 ಮತ್ತು 5 ರವರ ಸಮಕ್ಷಮ ಅಮಾನತ್ ಪಡಿಸಿಕೊಂಡು ಅಮಾನತ್ ಮಹಜರ್ ನ್ನು ಮದ್ಯಾಹ್ನ 12-45 ರಿಂದ 2-15 ವರೆಗೆ ಬರೆದಿರುತ್ತಾರೆ. ಸದರಿ

ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ನ ನಕಲನ್ನು ನೋಡುತ್ತಿದ್ದು, ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

ಆ ದಿನ ಪೋಲೀಸರು ಕರೆದುಕೊಂಡು ಬಂದಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ 1 ಆತನೇ ಆಗಿದ್ದಾನೆ.

**Cross Examination by: Sri. BS Counsel for A-1 & 2 ಃ-**

ನಾನು ಅಕ್ಟೋಬರ್ 2016 ರಿಂದ ಮಣಪ್ಪುರಂ ಗೋಲ್ಡ್ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಮೊದಲಿಗೆ ಸಿಬ್ಬಂದಿಯಾಗಿ ಸೇರಿಕೊಂಡು ನಂತರ ಮ್ಯಾನೇಜರ್ ವರೆಗೂ ಬಡ್ತಿ ಹೊಂದಿ ಕೆಲಸ ಮಾಡಿದ್ದೇನೆ. ನಾನು ಆ ರೀತಿ ಕೆಲಸ ಮಾಡುತ್ತಿದ್ದಾಗ ಹಾಸನದ ಬಿಎಂ ರಸ್ತೆಯ ಶಾಖೆಯಲ್ಲಿ ಸಿಸಿ ಟಿವಿ ಅಳವಡಿಸಲಾಗಿತ್ತು. ಪೋಲೀಸರು ಸಿಸಿ ಟಿವಿಯನ್ನು ಪರಿಶೀಲಿಸಿಲ್ಲ ಮತ್ತು ಅದರಿಂದ ಯಾವುದೇ ಸಿ.ಡಿ. ಅಥವಾ ಚಿತ್ರಗಳನ್ನು ವಶಕ್ಕೆ ಪಡೆದಿಲ್ಲ. ಅಡಮಾನ ಮಾಡಿದ್ದರು ಎಂದು ಹೇಳಿದ್ದು, ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಆ ವ್ಯಕ್ತಿಗಳು ಅಡಮಾನ ಮಾಡಿರಲಿಲ್ಲ. ನಮ್ಮ ಶಾಖೆಯಲ್ಲಿ ಯಾವುದೇ ವಸ್ತುಗಳನ್ನು ಅಡಮಾನ ಮಾಡುವಾಗ ಆ ವ್ಯಕ್ತಿಯ ಫೋಟೋ ಮತ್ತು ಆತನ ಖಾತೆಯನ್ನು ತೆಗೆದು ಆ ರೀತಿ ವಸ್ತುಗಳನ್ನು ಅಡಮಾನ ಮಾಡಿಕೊಳ್ಳುತ್ತೇವೆ. ಆ ದಾಖಲೆಗಳನ್ನು ಪೋಲೀಸರು ವಶಕ್ಕೆ ಪಡೆದಿದ್ದಾರೆ. ಮಹಜರ್ ನ್ನು ಲ್ಯಾಪ್ಟಾಪ್ ನಲ್ಲಿ ಅಲ್ಲಿಯೇ ಟೈಪ್ ಮಾಡಿದ್ದರು. ಪೋಲಿಸರು ಅದನ್ನು ಟೈಪ್ ಮಾಡಿದ್ದರು. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಪೋಲೀಸರು ಸಮವಸ್ತ್ರದಲ್ಲಿ ಬಂದಿದ್ದರು. ಎಷ್ಟು ಜನ ಬಂದಿದ್ದರು ಎಂದು ಈಗ ನನಗೆ ನೆನಪಿರುವುದಿಲ್ಲ. ಪ್ರಿಂಟನ್ನು ಲ್ಯಾಪ್ಟಾಪ್ ನಿಂದ ನಮ್ಮ ಶಾಖೆಯಲ್ಲಿದ್ದ ಪ್ರಿಂಟರ್ ಮೂಲಕ ತೆಗೆದಿದ್ದರು. ಮಹಜರ್ ನ್ನು ಎರಡು ಪುಟಗಳಲ್ಲಿ ಬರೆಯಲಾಗಿತ್ತು. ಮಹಜರ್ ನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತು. ಆದರೆ ಸ್ಪಷ್ಟವಾಗಿ ಹೇಳಲು ಆಗುುವುದಿಲ್ಲ ಎಂದು ಸಾಕ್ಷಿಯು

ಹೇಳುತ್ತಾರೆ. ಪ್ರಿಂಟ್ ನ್ನು ನಮ್ಮ ಶಾಖೆಯ ಪ್ರಿಂಟರ್ ನಲ್ಲಿ ತೆಗೆದಿದ್ದರು ಎಂದು ಮಹಜರ್ ನಲ್ಲಿ ಬರೆದಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಮಹಜರ್ ಗೆ ಬರುವ ಮೊದಲು ನನಗೆ ನೋಟೀಸ್ ಕೊಟ್ಟಿರಲಿಲ್ಲ. ಮಹಜರ್ ಗೆ ನಾನು, ಕುಮಾರ್ ಮತ್ತು ಚಂದ್ರೇಗೌಡ ಹಾಗೂ ನಮ್ಮ ಸಿಬ್ಬಂದಿಯಾದ ಸೌಮ್ಯ ಎನ್ನುವವರು ಸಹಿ ಮಾಡಿದ್ದರು. ಆರೋಪಿ 1 ರವರನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 1 ರವರ ಸಹಿಯನ್ನು ಮಹಜರ್ ಗೆ ಪಡೆದಿದ್ದರೋ ಅಥವಾ ಇಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ನಾನು ಹೋಗುವುದಕ್ಕೂ ಮೊದಲು ಆ ವ್ಯಕ್ತಿಗಳು ಆ ವಸ್ತುಗಳನ್ನು ಅಡಮಾನ ಮಾಡಿದ್ದರಿಂದ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

ಆರೋಪಿ 1 ರವರನ್ನು ನಮ್ಮ ಕಚೇರಿಗೆ ಕರೆದುಕೊಂಡು ಬಂದಿರಲಿಲ್ಲ ಮತ್ತು ನಮ್ಮ ಅಂಗಡಿಯಲ್ಲಿ ಆರೋಪಿ 1 ರವರು ಮೇಲೆ ಹೇಳಿದ ವ್ಯಕ್ತಿಗಳ ಹೆಸರಲ್ಲಿ ಯಾವುದೇ ವಸ್ತುಗಳನ್ನು ಅಡಮಾನ ಮಾಡಿರಲಿಲ್ಲ ಮತ್ತು ಪೋಲೀಸರು ಯಾವುದೇ ಅಮಾನತ್ ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**Re-Examination NIL**
**(R.O.A & I.C.)**
sd/-

**(Mohamed Arifulla C.F)**
SENIOR CIVIL JUDGE JMFC,
TIPTUR